ಮುಂದೂಡಲು ಆಹಾರ ಸೇವನೆ ಕಡಿಮೆ ಮಾಡಿದ್ದರು. ಇದು ಮತ್ತೊಂದು ವಿಪರೀತಕ್ಕೆ ದಾರಿಯಾಯಿತು. ಅವರ ಹಿಮೊಗ್ಲೋಬಿನ್ 6 ಗ್ರಾಮ್‌ಗೆ ಕುಸಿದು ಹೋಗಿತ್ತು. ಒಂದು ಹಂತದಲ್ಲಿ ಉಣ್ಣುವುದೂ ಕಷ್ಟವಾಗಿ, ತಾಯಿ ತಮ್ಮ ಕೈಯಿಂದ ಮಗನಿಗೆ ತುತ್ತು ತಿನ್ನಿಸುವ ಪರಿಸ್ಥಿತಿ ಬಂದಿತು. ಸುರೇಶ್ ಆತ್ಮಹತ್ಯೆಯ ಬಗ್ಗೆ ಯೋಚಿಸತೊಡಗಿದ್ದರು. ಆಗ ಕುಟುಂಬಕ್ಕೆ ಅರ್ಥವಾಗಿತ್ತು – ಲೋಕಭೀತಿಯಲ್ಲಿ ಆಸ್ಪತ್ರೆಗೆ ಸೇರದೆ ಕುಳಿತರೆ, ಮಗ ಉಳಿಯುವಂತಿಲ್ಲ.

## ಕೊನೆಗೂ ವಾಸಿಯಾದ ಕಾಯಿಲೆ

ಮಹಾರಾಷ್ಟ್ರದಲ್ಲಿ ಕುಷ್ಠರೋಗಕ್ಕೆ ಎರಡು ಕಡೆ ಚಿಕಿತ್ಸೆ ದೊರೆಯುತ್ತಲಿತ್ತು. ಒಂದು ಅಮ್ರಾವತಿ ಜಿಲ್ಲೆಯ 'ತಪೋವನ' ಎಂಬಲ್ಲಿ. ಮತ್ತೊಂದು ಪುಣೆಯಲ್ಲಿ. ದೂರದ ಪುಣೆಗೆ ಹೋಗುವುದರಿಂದ ಮಗನ ಕಾಯಿಲೆಯ ವಿಷಯ ಸ್ವಲ್ಪವಾದರೂ ಗುಟ್ಟಾಗಿ ಉಳಿಯಬಲ್ಲದು ಎಂದೆನಿಸಿ, ಸುರೇಶ್ ಅವರನ್ನು ಪುಣೆಯ ಕೋಂಢ್ವಾ ಎಂಬಲ್ಲಿ ಇರುವ 'ಡಾ. ಭಂಡೋರವಾಲಾ ಸರಕಾರಿ ಕುಷ್ಠರೋಗದ ಆಸ್ಪತ್ರೆ'ಗೆ ಅವರ ತಂದೆ ಕರೆತಂದರು. ಅಷ್ಟು ಹೊತ್ತಿಗೆ ಸುರೇಶ್ ಅವರಿಗೆ ನಡೆಯಲೂ ಅಸಾಧ್ಯವಾಗಿತ್ತು. ಮೂಗು ವಿಪರೀತ ನೋಯುತ್ತಿತ್ತು. ವೈದ್ಯರು ಕೋಪದಿಂದ ಒರಟಾಗಿ ಹೇಳಿದರು – 'ನೀವು ತೀರಾ ತಡವಾಗಿ ಬಂದಿದ್ದೀರಿ. ನಿಮ್ಮ ಮಗನ ಕಾಯಿಲೆ ಬಹಳ ಮುಂದುವರೆದು ಶೋಚನೀಯ ಹಂತದಲ್ಲಿದೆ. ಆತ ಉಳಿಯುವುದಿಲ್ಲ'. ತಂದೆಯ ಎದೆ ಒಡೆದಿತ್ತು. ಹೇಗಾದರೂ ಸರಿ ಮಗನನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳಲು ಅಂಗಲಾಚಿದರು. ಅವರ ಸ್ಥಿತಿ ನೋಡಿದ ವೈದ್ಯರು ಕರುಣೆಯಿಂದ ಸುರೇಶ್ ಅವರನ್ನು ಆಸ್ಪತ್ರೆಗೆ ಸೇರಿಸಿಕೊಂಡರು.

ಆಸ್ಪತ್ರೆಯಲ್ಲಿ ಸುರೇಶ್ ನೋಡುತ್ತಾರೆ – ಅಲ್ಲಿ ಎಲ್ಲೆಲ್ಲೂ ಕುಷ್ಠರೋಗಿಗಳೇ ಇದ್ದಾರೆ. 'ಅವರೆಲ್ಲರೂ ನನಗೆ ಭಿಕ್ಷುಕರಂತೆ ಕಂಡರು. ನಾನೂ ಅದೇ ಸ್ಥಿತಿ ತಲುಪಿದಂತೆ ಅನಿಸಿತ್ತು' ಎಂದು ಸುರೇಶ್ ಹೇಳಿದರು.

ದೊಡ್ಡ ಕುಟುಂಬದ ಜವಾಬ್ದಾರಿ ಹೊತ್ತ ತಂದೆ ಮಗನನ್ನು ಆಸ್ಪತ್ರೆಗೆ ಸೇರಿಸಿ ಹಳ್ಳಿಗೆ ಹಿಂತಿರುಗಿದರು. ಬದುಕು ಪಾತಾಳಕ್ಕೆ ತಲುಪಿತ್ತು. ಆ ಕ್ಷಣ ಸುರೇಶ್ ಅವರಿಗೆ ತಮಗೆ ಕಾದಿದ್ದ ಭವ್ಯ ಭವಿಷ್ಯದ ಯಾವ ಸೂಚನೆಯೂ ಕಣ್ಣೆದುರಿರಲಿಲ್ಲ. ಅವರಿಗಿದ್ದ ಒಂದೇ ಭಾಗ್ಯವೆಂದರೆ, ಆಸ್ಪತ್ರೆ ಸುರೇಶ್ ಅವರಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತಿತ್ತು. ಅಲ್ಲಿ ರೋಗಿಗಳಿಗೆ ಎಲ್ಲ ಸೇವೆಯೂ ಉಚಿತವಿತ್ತು. ಸುರೇಶ್ ಸುಮಾರು ಆರು ತಿಂಗಳು ಹಾಸಿಗೆಯಲ್ಲಿಯೇ ಉಳಿದಿದ್ದರು. ಪುಣ್ಯಕ್ಕೆ ನಿಧಾನವಾಗಿಯಾದರೂ ನಿಯಮಿತವಾಗಿ ನೀಡುತ್ತಿದ್ದ ಔಷಧಿಗಳು ಕೆಲಸ ಮಾಡಿದವು. ಅವರ ಕುಷ್ಠರೋಗವನ್ನು ಅಲ್ಲಿಗೇ ತಡೆದು ನಿಲ್ಲಿಸಿದವು.

ಆಸ್ಪತ್ರೆಯಲ್ಲಿ ಒಂದು ನಿಯಮವಿತ್ತು. ಪ್ರತಿಯೊಬ್ಬ ರೋಗಿಯೂ ಒಂದಿಷ್ಟು ಕೆಲಸ ಮಾಡಬೇಕು. 'ನೀನು ಏನು ಕೆಲಸ ಮಾಡಬಲ್ಲೆ? ಕಸ ಗುಡಿಸುವೆಯಾ, ಇಲ್ಲ ಔಷಧಾಲಯದಲ್ಲಿ ಸಹಾಯಕನಾಗುವೆಯಾ?' ಎಂದವರು

### ಕುಷ್ಠ: ಅತಿ ಪುರಾತನ ರೋಗ

ಕುಷ್ಠರೋಗ ಅತ್ಯಂತ ಪುರಾತನ ರೋಗ. ಕ್ರಿ.ಪೂ. 600ರ 'ಸುಶ್ರುತ ಸಂಹಿತೆ'ಯಲ್ಲಿ ಇದರ ಉಲ್ಲೇಖವಿದೆ, ಚಿಕಿತ್ಸೆಯ ವಿಧಾನವಿದೆ. ಯೇಸು ಸ್ವಾಮಿಯು ಕುಷ್ಠರೋಗಿಗಳಿಗೆ ಶುಶ್ರೂಷೆ ಮಾಡಿ ವಾಸಿಮಾಡಿದ್ದನ್ನು ಬೈಬಲ್ ತಿಳಿಸುತ್ತದೆ. ಅತ್ಯಂತ ಪುರಾತನ ಕಾಯಿಲೆ ಆಧುನಿಕ ಕಾಲದಲ್ಲೂ ಕಾಡುತ್ತಿರುವುದೇ ವಿಷಾದದ ವಿಷಯ.

ಇಂದಿಗೂ ವಿಶ್ವದಲ್ಲಿ ಪ್ರತಿ ವರ್ಷ 2 ಲಕ್ಷ ಜನ ಹೊಸದಾಗಿ ಕುಷ್ಠರೋಗವನ್ನು ಪಡೆಯುತ್ತಿದ್ದಾರೆ. ಅದರಲ್ಲಿ ಶೇ. 57ರಷ್ಟು ಹೊಸ ಪ್ರಕರಣಗಳು ಭಾರತದಲ್ಲಿ ಇರುವುದು ನೋವಿನ ಸಂಗತಿ. ಭಾರತ ವಿಶ್ವದಲ್ಲಿಯೇ ಅತಿ ಹೆಚ್ಚು ಕುಷ್ಠರೋಗಿಗಳನ್ನು ಹೊಂದಿದೆ.

ಈ ರೋಗದ ಬಗ್ಗೆ ಬಹಳಷ್ಟು ತಪ್ಪು ಕಲ್ಪನೆಗಳಿವೆ, ತಾರತಮ್ಯದ ಕಾನೂನುಗಳಿವೆ. ಈ ಕಾನೂನುಗಳು ಬದಲಾಗುವ ನಿರೀಕ್ಷೆ ಇದೆ. ಅಂತಹ 'ಬಿಲ್' ಒಂದನ್ನು 2021ರಲ್ಲಿ ರಾಜ್ಯಸಭೆಯಲ್ಲಿ ಮಂಡಿಸಲಾಗಿದೆ. ಘನತೆಯ ಬದುಕನ್ನು ನೀಡುವ ಕಾನೂನಿಗೆ ಕಾಯುತ್ತಲೇ, ಕುಷ್ಠರೋಗದ ಬಗ್ಗೆ ಜನಜಾಗೃತಿ ಮೂಡಿಸುತ್ತಾ, ಕುಷ್ಠರೋಗಿಗಳಿಗೆ ಬದುಕು ಕಂಡುಕೊಳ್ಳಲು ನೆರವಾಗುತ್ತಿದೆ 'ದಿ ಲೆಪ್ರಸಿ ಮಿಷನ್ ಟ್ರಸ್ಟ್ ಇಂಡಿಯಾ'.




ಸೇಂಟ್ ಮಾರ್ಕ್ಸ್ ಕ್ಯಾಥೆಡ್ರಲ್‌ನಲ್ಲಿ ಕುಷ್ಠರೋಗ ನಿಯಂತ್ರಣದ ಬಗ್ಗೆ ಸುರೇಶ್ ಧೋಂಡ್ಗೆ ಮಾತು